<u>ಸಿ.ಸಿ ನಂ. 1087/2017</u> ಪಿ.ಡಬ್ಲ್ಯು-1

<u>ದಿನಾಂಕ 11/06/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರಿ **ಪಾಟೀ ಸವಾಲುಃ**</u> ಶ್ರೀ ಎಂ.ಎಲ್.ಡಿ **ವಕೀಲರಿಂದ**

ಮಾಸ್ಟರ್ ಮಂಜುನಾಥ್ ನನಗೆ ಸಂಬಂಧಿಕರಲ್ಲ. ಚೆಕ್ಕು ನಗದೀಕರಣಕ್ಕೆ ಹಾಜರುಪಡಿಸಿ ನಂತರ ನಾನು ಯಾವುದೇ ತರಹದ **verification** ಮಾಡಲಿಲ್ಲ. ಚೆಕ್ಕು ಹಾಕುವ ಮುನ್ನವೂ ಯಾವುದೇ **verification** ಮಾಡಲಿಲ್ಲ. ಖಾತೆ ಮತ್ತು ಚೆಕ್ಕಿನ ಬಗ್ಗೆ ಯಾವುದೇ **verification** ನಾನು ಬ್ಯಾಂಕಿಗೆ ಹೋಗಿ ಮಾಡಿಲ್ಲ. ಆರೋಪಿಯ ಖಾತೆ ಸಂಖ್ಯೆ ನನಗೆ ನೆನಪಿಲ್ಲ. ಆರೋಪಿಯ ಖಾತೆ ಸಂಖ್ಯೆ ಚೆಕ್ಕನ್ನು ನೋಡಿದ ನಂತರವೇ ನಾನು ತಿಳಿದುಕೊಂಡಿದ್ದೇನೆ. ಖಾತೆ ಸಂಖ್ಯೆ ಹೇಳಲು ನಗೆ ಈಗ ನೆನಪಿಲ್ಲ. ನಾನು ಚೆಕ್ಕನ್ನು ನೋಡಿಯೇ ಇಲ್ಲ, ಖಾತೆ ಸಂಖ್ಯೆ ಗೊತ್ತೇ ಇಲ್ಲದೇ ಇರುವ ಕಾರಣ ನನಗೆ ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ.

2. ನನಗೆ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ಬ್ಯಾಂಕಿನವರು ವಿಷ್ಣುಕುಮಾರ್ ರವರಿಗೆ ಸಂಬಂಧಿಸಿದಂತೆ ಸಹಿ ಮಾದರಿ ಬಗ್ಗೆ ನೀಡಿರುವ ಹಿಂಬರಹವನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ ಮೇರೆಗೆ ಅದನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ವಿಷ್ಣು ಕುಮಾರ್ ರವರ ಹೆಸರಿನಲ್ಲಿರುವ ಪಾಸ್ ಬುಕ್ಕನ್ನು ತೋರಿಸಿ ಸಾಕ್ಷಿ ಅದನ್ನು ಒಪ್ಪಿದ ಮೇರೆಗೆ ಅದನ್ನು ನಿ.ಡಿ 2 ಎಂದು ಗುರುತಿಸಲಾಯಿತು. ನಿ.ಡಿ 2 ರ ಪ್ರಕಾರ ವಿಷ್ಣು ಕುಮಾರ್ ರವರ ಖಾತಾ ಸಂಖ್ಯೆ**54026957470** ಆಗಿದೆ ಎಂದರೆ ಸರಿ. ನಿ.ಡಿ 1 ರಲ್ಲೂ ಅದೇ ಖಾತೆ ಸಂಖ್ಯೆ ನಮೂದಾಗಿದೆ ಎಂದರೆ ಸರಿ. ಸಾಕ್ಷಿಗೆ ನಿ.ಪಿ 1 ನ್ನು ತೋರಿಸಿ ಅದರಲ್ಲಿರುವ ಖಾತೆ ಸಂಖ್ಯೆ **01190008213** ಎಂದು ನಮೂದಾಗಿದೆ ಎಂದು ಸೂಚಿಸಲು ಸಾಕ್ಷಿ ಹೌದು ಎಂದು ಒಪ್ಪುತ್ತಾರೆ. ಸಾಕ್ಷಿಗೆ ಎರಡೂ ಖಾತೆ ಸಂಖ್ಯೆಗಳು ಬೇರೆ ಬೇರೆಯಾಗಿಯೇ ಇವೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಮೊದಲು ಖಾತೆ ತೆರೆದಾಗ ಇದ್ದ ಸಂಖ್ಯೆ ಇರಬಹುದು ಎಂದು. ನಿ.ಪಿ 1 ರಲ್ಲಿರುವ ಖಾತೆ ತೆರೆದ ಸಂಖ್ಯೆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ರೀತಿ ದಾಖಲೆ ಹಾಜರುಪಡಿಸಲು ನಿಮಗೆ ತೊಂದರೆ ಇದೆಯೇ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಬ್ಯಾಂಕಿನವರನ್ನು ಕೇಳಬೇಕಾಗುತ್ತದೆ ಎಂದು. ಸಾಧಾರಣವಾಗಿ ಯಾವುದಾದರೂ ವ್ಯಕ್ತಿ ಖಾತೆ ತೆರೆದಾಗ ನೀಡುವ ಸಂಖ್ಯೆ ಅಂತಿಮದವರೆಗೂ ಅದೇ ಸಂಖ್ಯೆ ಇರುತ್ತದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಬದಲಾಗುತ್ತಾ ಇರುತ್ತದೆ

ಎಂದು. ಈ ರೀತಿ ಖಾತೆ ಸಂಖ್ಯೆ ಬದಲಾಗುತ್ತಿರುವ ಬಗ್ಗೆ ಯಾವುದಾದರೂ ದಾಖಲೆ ನ್ಯಾಯಾಲಯಕ್ಕೆ ನೀಡಲು ನಿಮಗೆ ತೊದರೆ ಇದೆಯೇ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಮೊದಲಿಗೆ ಒಂದು ಖಾತೆ ಸಂಖ್ಯೆ ಕೊಟ್ಟಿದ್ದು, ಡಿಜಿಟಲ್/ ಆನ್ ಲೈನ್ ಆದ ಮೇಲೆ ಬೇರೊಂದು ಸಂಖ್ಯೆಕೊಟ್ಟಿರುತ್ತಾರೆ ಎಂದು.

**3.** ಸಾಕ್ಷಿಗೆ ನಿ.ಪಿ **1** ನ್ನು ತೋರಿಸಿ ದಿನಾಂಕದ ಶಾಹಿಗೂ ಪದಗಳ ಶಾಹಿಗೂ ತಾಳೆಯಿಲ್ಲ ಎಂದು ಸೂಚಿಸಲು ಸಾಕ್ಷಿ ತಾಳೆ ಇದೆ ಎಂದು ಹೇಳುತ್ತಾರೆ. ನಿ.ಪಿ **1** ರಲ್ಲಿ ಇರುವ ಸಹಿಗೂ ಶಾಹಿಗೂ ಪದಗಳ ಶಾಹಿಗೂ ವ್ಯತ್ಯಾಸ ಇದೆ ಎಂದರೆ ಸರಿ. ನಿ.ಪಿ **1** ರಲ್ಲಿರುವ ಸಹಿಯ ಅಕ್ಷರಗಳಿಗೂ ಅದರಲ್ಲಿರುವ ಹೆಸರು, ಮೊತ್ತದ ಅಕ್ಷರಗಳಿಗೂ ವ್ಯತ್ಯಾಸವಿದೆ ಎಂದರೆ ಸರಿ. ಸಾಕ್ಷಿಗೆ ನಿ.ಪಿ **1** ನ್ನು ತೋರಿಸಿ ಅದರಲ್ಲಿರುವ ಮುಂಭಾಗದ ಸಹಿಗೂ, ಹಿಂಭಾಗದಲ್ಲಿರುವ ಸಹಿಗಳಿಗೂ ವ್ಯತ್ಯಾಸವಿದೆ ಎಂದು ಸೂಚಿಸಲು ಸಾಕ್ಷಿ ಸರಿಯಲ್ಲ ಎಂದು ಹೇಳುತ್ತಾರೆ. ನಿ.ಪಿ **1** ರಲ್ಲಿರುವ ಸಹಿಗೂ ನಿ.ಡಿ **1** ರಲ್ಲಿರುವ ಸಹಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿ.ಪಿ **1** ರಲ್ಲಿರುವ ಸಹಿಗೂ ಸ್ವೀಕೃತಿ ಪತ್ರದಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಸ್ವಲ್ಪ ಬದಲಾವಣೆ ಇದೆ ಎಂದು.

**4.** ಆರೋಪಿ ನಗೆ ಇಂತಿಷ್ಟೇ ವರ್ಷಗಳಿಂದ ಪರಿಚಯ ಇರುತ್ತಾರೆ ಎಂಬ ಬಗ್ಗೆ ನನ್ನ ಫಿರ್ಯಾದಿನಲ್ಲಿ ನಮೂದು ಮಾಡಿಲ್ಲ. ಈ ರೀತಿ ನಮೂದು ಮಾಡಿಸಲು ನಿಮಗೆ ತೊಂದರೆ ಇತ್ತೇ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಮಂಜುನಾಥರವರ ಮೂಲಕ ನನಗೆ ಪರಿಚಯವಾಗಿದ್ದ ಕಾರಣ ನಾನು ಅಷ್ಟಾಗಿ ಅದನ್ನು ಗಮನಿಸಲಿಲ್ಲ. ನನ್ನ ಫಿರ್ಯಾದಿನಲ್ಲಿ ನಮೂದು ಮಾಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಮಂಜುನಾಥ ರವರಿಂದ ಆರೋಪಿಯ ಪರಿಚಯ ನನಗಾಯಿತು ಎಂಬ ಅಂಶವನ್ನು ನನ್ನ ಫಿರ್ಯಾದಿನಲ್ಲಿ ನಮೂದು ಮಾಡಿಸಿಲ್ಲ. ನನ್ನ ಫಿರ್ಯಾದಿನಲ್ಲಿ ಸಾಕ್ಷಿದಾರರ ಪಟ್ಟಿಯಲ್ಲಿ ಮಂಜುನಾಥ ರವರ ಹೆಸರನ್ನು ನಮೂದು ಮಾಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. **2014** ರ ಕಾಲಕ್ಕೆ ಆರೋಪಿ ಯಾವ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಈ ರೀತಿ ದಾಖಲೆಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಮಂಜುನಾಥರವರ ಮೂಲಕ ಪರಿಚಯವಾಗಿರುವ ಕಾರಣ ಆರೋಪಿಯ ತಂದೆ, ಅವರ ಕುಟುಂಬಸ್ಥರ ವಿವರಗಳು ನಿಮಗೆ ಗೊತ್ತಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಆತನ ತಂದೆಯ ಹೆಸರು ನಿಂಗಯ್ಯ ಎಂತಷ್ಟೇ ಗೊತ್ತು.

5. 2014 ರ ಮುಂಚೆ ಅಥವಾ ತದನಂತರ ಅಥವಾ 2014 ರಲ್ಲಿ ನಾನು ಆದಾಯ ತೆರಿಗೆ ಪಾವತಿದಾರನಾಗಿರಲಿಲ್ಲ. ಆದಾಯ ತೆರಿಗೆ ಮಾಡಲು ಪಾವತಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.